3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು
ಕ್ರಿಮಿನಲ್ ಮಿಸ್. ಸಂಖ್ಯೆ144/2019. PW-1

ದಿನಾಂಕ 16.06.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಸಿ ಎಂ ಜಿ ವಕೀಲರಿಂದಃ-**

ಎದುರುದಾರರೊಂದಿಗೆ ನನ್ನ ವಿವಾಹ 2011 ರಲ್ಲಿ ಆಗಿರುತ್ತದೆ. ನಾನು ಎದುರುದಾರನೊಂದಿಗೆ ವಿವಾಹವಾದಾಗಿನಿಂದ 5 ½ ವರ್ಷಗಳ ಕಾಲ ಚೆನ್ನಾಗಿ ಗೋವಿಂದಪುರದಲ್ಲಿ ವಾಸವಿದ್ದೆವು. ಗೋವಿಂದಪುರದಲ್ಲಿ ವಾಸವಿದ್ದಾಗ ನಾನು ಚುನಾವಣಾ ಗುರುತಿಸಿನ ಚೀಟಿ ಮಾಡಿಸಿಕೊಳ್ಳಲು ಪ್ರಯತ್ನಿಸಿದ್ದೆ. ಗುರುತಿನ ಚೀಟಿ ಬೇಕು ಎಂದು ನಾನು ಅರ್ಜಿ ಕೊಟ್ಟ ಬಗ್ಗೆ ದಾಖಲೆ ನನ್ನ ಬಳಿ ಇಲ್ಲ. ಹೆಚ್.ರಾಂಪುರದಲ್ಲಿ ನಾನು ಗುರುತಿನ ಚೀಟಿ ಹೊಂದಿದ್ದು ಮತದಾನವನ್ನು ಮಾಡುತ್ತಿದ್ದೇನೆ. ಸದರಿ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಗೆ ತೊಂದರೆ ಇರುವುದಿಲ್ಲ.

ಪಡಿತರಚೀಟಿಯನ್ನು ನಾನು ಮಾಡಿಸಿರುವುದಿಲ್ಲ. ನಾನು ಎದುರುದಾರನೊಂದಿಗೆ ವಾಸವಿದ್ದಾಗ ಆಧಾರ ಕಾರ್ಡ್ ಅಥವಾ ಪಡಿತರ ಚೀಟಿಯನ್ನು ಎದುರುದಾರನು ಮಾಡಿಸಿರುವುದಿಲ್ಲ. ನನ್ನ ಆಧಾರ್ ಕಾರ್ಡ್ ಅನ್ನು ಎದುರುದಾರರ ವಿಳಾಸದಲ್ಲಿ ಮಾಡಿಸಿರುತ್ತೇನೆ. ನಾನು ಪಡಿತರ ಚೀಟಿಯನ್ನು ಗಂಡನ ಮನೆಯಲ್ಲಿಯೂ ಮಾಡಿಸಿಲ್ಲ ಮತ್ತು ತಾಯಿಯ ಮನೆಯಲ್ಲಿಯೂ ಮಾಡಿಸಿಲ್ಲ. ನನ್ನ ತಂದೆ ತಾಯಿ ಈಗಲೂ ಹೆಚ್.ರಾಂಪುರದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಾನು ನನ್ನ ತಂದೆ-ತಾಯಿಯೊಂದಿಗೆ ಹೆಚ್ ರಾಂಪುರದಲ್ಲಿ ವಾಸವಿರುತ್ತೇನೆ. ನನ್ನ ತಂದೆ-ತಾಯಿಗೆ ಒಟ್ಟು 1 ಎಕರೆ ಜಮೀನು ಇರುತ್ತದೆ. ಸದರಿ ಜಮೀನು ಖುಷ್ಕಿ ಜಮೀನಾಗಿರುತ್ತದೆ. ಸದರಿ ಜಮೀನಿನಲ್ಲಿ ನನ್ನ ತಂದೆ-ತಾಯಿ ರಾಗಿ ಮತ್ತು ಜೋಳ ಬೆಳೆಯುತ್ತಿರುತ್ತಾರೆ. ವಾರ್ಷಿಕವಾಗಿ ಸುಮಾರು 10 ರಿಂದ 15 ಚೀಲ ರಾಗಿ ಮತ್ತು 10 ರಿಂದ 15 ಚೀಲ ಮೆಕ್ಕೆ ಜೋಳವನ್ನು ಬೆಳೆಯುತ್ತಾರೆ. ವಾರ್ಷಿಕವಾಗಿ ಸುಮಾರು ರೂ.20,000/- ಆದಾಯ ಬರುತ್ತದೆ. ನನ್ನ ತಂದೆ ಮನೆಯಲ್ಲಿ ನನ್ನ ತಂದೆ, ತಾಯಿ, ನನ್ನ ತಮ್ಮ ಮತ್ತು ನಾನು ಇರುತ್ತೇವೆ. ನನ್ನ ತಂದೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ವಾರ್ಷಿಕವಾಗಿ ಬರುವ ರೂ.20000/- ಆದಾಯವು ನನ್ನ ತಂದೆ ಕುಟುಂಬಕ್ಕೆ ಊಟ ತಿಂಡಿಯ ಖರ್ಚಿಗೆ

ಸಾಕಾಗುತ್ತದೆ ಎಂದರೆ ಸರಿ. ಖುಷ್ಕಿ ಜಮೀನನ್ನು ಹೊರತು ಪಡಿಸಿ ಬೇರೆ ಯಾವುದೇ ಆದಾಯ ನಮಗೆ ಇರುವುದಿಲ್ಲ. ನಾನು ಓದಿರುವುದಿಲ್ಲ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವುದನ್ನು ಓದಿ ತಿಳಿದುಕೊಂಡಿರುವುದಿಲ್ಲ. ನನಗೆ ಒಂದು ಹೆಣ್ಣು ಮಗು ಇದ್ದು, ಸದರಿ ಹೆಣ್ಣು ಮಗು ದಿಃ02.06.2017 ರಂದು ಜನಿಸಿರುತ್ತದೆ. ನಾನು ಎದುರುದಾರರೊಂದಿಗೆ ಕೇವಲ 1 ವರ್ಷ ಮಾತ್ರ ಜೀವನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 5 ½ ವರ್ಷ ಎದುರುದಾರನೊಂದಿಗೆ ಜೀವನ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರನೊಂದಿಗೆ ನಾನು 1 ವರ್ಷಕ್ಕಿಂತ ಹೆಚ್ಚು ಜೀವನ ನಡೆಸದ ಕಾರಣದಿಂದಾಗಿ ಎದುರುದಾರರು ಇರುವ ವಿಳಾಸದಲ್ಲಿ ಪಡಿತರ ಚೀಟಿ, ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್ ಅನ್ನು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಎದುರುದಾರನೊಂದಿಗೆ ವಿವಾಹವಾಗುವಾಗ ಎದುರುದಾರನಿಗೆ ವರದಕ್ಷಿಣೆಯನ್ನು ನೀಡಿದ್ದು, ಗಾಳಿಹಳ್ಳಿಯಲ್ಲಿದ್ದ ನನ್ನ ತಂದೆಯ ಜಮೀನನ್ನು ಮಾರಿ ಎದುರುದಾರನಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ಸದರಿ ವಿಚಾರವಾಗಿ ಜಮೀನು ಮಾರಾಟ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದೇ, ನನ್ನ ತಂದೆಯ ತಮ್ಮನಿಗೆ ಜಮೀನನ್ನು ಮಾರಾಟ ಮಾಡಿದ್ದರಿಂದ ಬಾಯಿ ಮಾತಿನ ಮೂಲಕ ವಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ತಮ್ಮನಿಗೆ ಜಮೀನು ಮಾರಾಟಾ ಮಾಡಿ ಎದುರುದಾರರಿಗೆ ವರದಕ್ಷಿಣೆ ಹಣವನ್ನು ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ.

ವಿವಾಹದ ಸಂದರ್ಬದಲ್ಲಿ ಎದುರುದಾರರಿಗೆ ನನ್ನ ತಂದೆ-ತಾಯಿ 200 ಗ್ರಾಂ ಚಿನ್ನಾಭರಣಗಳು, 2 ½ ಕೆ ಜಿ ಬೆಳ್ಳಿ, 2 ಲಕ್ಷ ನಗಧು ಹಣ ಮತ್ತು ವಿವಾಹಕ್ಕೆ ಖರ್ಚಾಗಿರುವ ಹಣ ರೂ.1,00,000/- ಎಂದು ನನ್ನ ಅರ್ಜಿಯಲ್ಲಿ ತಿಳಿಸಿದ್ದು ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಈ ಪ್ರಕರಣದಲ್ಲಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಎದುರುದಾರರ ಮೇಲೆ ಒಟ್ಟು 3 ಕೇಸು ಹಾಕಿರುತ್ತೇನೆ. ನನ್ನ ತಂದೆ-ತಾಯಿಗೆ ಎದುರುದಾರನೊಂದಿಗೆ ಈ ಮೇಲಿನಂತೆ ಎಲ್ಲಾವನ್ನು ಕೊಟ್ಟು ವಿವಾಹ ಮಾಡಿಕೊಡಲು ಶಕ್ತಿ ಇರಲಿಲ್ಲ. ಎದುರುದಾರರರೇ ವಿವಾಹದ ಎಲ್ಲಾ ಖರ್ಚುಗಳನ ಭರಿಸಿ ಯಾವುದೇ ವರದಕ್ಷಿಣೆಯನ್ನ ತೆಗೆದುಕೊಳ್ಳದೆ ನನ್ನೊಂದಿಗೆ ವಿವಾಹ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಎದುರುದಾರರು ನನಗೆ ಕಿರುಕುಳ ನೀಡುತ್ತಿದ್ದ ಬಗ್ಗೆ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ, ಆ ಬಗ್ಗೆ ದೂರಿನ ದಾಖಲೆಯನ್ನು ಈ ಕೇಸಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಎದುರುದಾರರಿಗೆ ನನ್ನ ತಂದೆ-ತಾಯಿ ರೂ.70000 ಬೆಲೆ ಬಾಳುವ 1 ಬೈಕ್ ಅನ್ನು ನೀಡಿರುವುದಿಲ್ಲವೆಂದರೆ ಸರಿಯಲ್ಲ. ಮತ್ತು ಎದುರುದಾರರು ಅವರ ಕಟ್ಟೆ ಚಟಗಳಿಗೋಸ್ಕರ ರೂ.1,10,000/- ಗಳನ್ನು ಪಡೆದಿರುವುದಿಲ್ಲವೆಂದರೆ ಸರಿಯಲ್ಲ. ಎದುರುದಾರರಿಗೆ ನೀಡಿದ ಬೈಕಿನ ಸಂಖ್ಯೆ ನನಗೆ ಗೊತ್ತಿಲ್ಲ ಹಾಗೂ ಯಾವ ಕಂಪ ನಿಯ ಬೈಕ್ ಎಂದುನನಗೆ ಗೊತ್ತಿಲ್ಲ. ಮಾಧವ ರೆಡ್ಡಿ ಎಂಬುವವರು ನನ್ನ ತಾತಾನಾಗಬೇಕು. ಮಾಧವ ರೆಡ್ಡಿ ಎಂಬುವವರು ನನ್ನ ತಂದೆ-ತಾಯಿಯ ಸಂಬಂಧಿಕರಲ್ಲ. ಆದರೆ ನನ್ನ ತಂದೆ-ತಾಯಿ ಮಾಧವ ರೆಡ್ಡಿ ರವರ ಬಳಿ ಕೆಲಸಕ್ಕೆ ಹೋಗುತ್ತಿರುವ ಸಂದರ್ಬದಲ್ಲಿ ನಾನು ನನ್ನ ತಂದೆ ತಾಯಿಯೊಂದಿಗೆ ಮಾಧವ ರೆಡ್ಡಿ ರವರ ಮನೆಗೆ ಹೋಗುತ್ತಿದ್ದೆ. ಮಾಧವ ರೆಡ್ಡಿ ರವರು ನನ್ನ ತಂದೆ-ತಾಯಿಯ ಕಷ್ಟವನ್ನು ನೋಡಲಾಗದೆ ನನ್ನನ್ನು ಮಾಧವ ರೆಡ್ಡಿ ರವರೇ ಸಾಕಿಕೊಂಡಿರುತ್ತಾರೆ. ಆದ್ದರಿಂದ ಮಾದವ ರೆಡ್ಡಿ ರವರನ್ನು ತಾತಾ ಎಂಬುದಾಗಿ ಕರೆಯುತ್ತಿರುತ್ತೇನೆ. ಮಾದವ ರೆಡ್ಡಿ ರವರು ಬೆಂಗಳೂರಿನ ದೇವನಹಳ್ಳಿಯಲ್ಲಿ ವಾಸವಿದ್ದರು. ಈಗ ಅವರು ಅಲ್ಲಿ ವಾಸವಿರುವುದಿಲ್ಲ. ಈಗ ಮಾಧವ ರೆಡ್ಡಿ ರವರು ಆಂದ್ರದ ಕರ್ನೂಲು ನಲ್ಲಿ ವಾಸವಿರುತ್ತಾರೆ. ನಾನು ಮಾದವ ರೆಡ್ಡಿ ರವರೊಂದಿಗೆ ವಾಸವಿರುವುದಿಲ್ಲ. ನಾನು ಮದವ ರೆಡ್ಡಿ ರವರ ಸಾಕು ಮಗಳು ಎಂದು ಯಾವುದೇ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ. ಮಾದವ ರೆಡ್ಡಿ ರವರು ನನ್ನ ತಾಯ ಅವರಿಂದ ನಾನು ಎದುರುದಾರರಿಗೆ ಹಣವನ್ನು ಕೊಡಿಸಿರುತ್ತೇನೆ ಎಂದು ಎಂಬುದು ಸುಳ್ಳು ಎಂದರೆ ಸರಿಯಲ್ಲ.

ಮಾದವರೆಡ್ಡಿ ರವರನ್ನು ಹಾಗಾಗ್ಗೆ ಅನಾರೋಗ್ಯವಿದ್ದ ಸಮಯದಲ್ಲಿ ನೋಡಿಕೊಂಡು ಬರಲು ಹೋಗುತ್ತಿರುತ್ತೇನೆ. ಎದುರುದಾರರ ತಂದೆ-ತಾಯಿಗಳು ಸಹಃ ಸೇರಿಕೊಂಡು ನನಗೆ ತೊಂದರೆ ನೀಡಿರುತ್ತಾರೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ನಾನೇ ಸ್ವತಃ ಎದುರುದಾರರು ಮತ್ತು ಎದುರುದಾರರ ಮನೆಯನ್ನು ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಒಂದು ಹೆಣ್ಣು ಮಗು ಇರುವುದು ಎದುರುದಾರೊಂದಿಗೆ ಇದ್ದಾಗ ಜನಿಸಿದ ಮಗು ಅಲ್ಲ ಎಂದರೆ ಸರಿಯಲ್ಲ. ಏಕೆಂದರೆ ನಾನು ಎದುರುದಾರರೊಂದಿಗೆ ಒಂದೇ ವರ್ಷ ಮಾತ್ರ ವಾಸವಿದ್ದದ್ದರಿಂದ

ಎದುರುದಾರರಿಗೆ ಸದರಿ ಮಗು ಜನಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 5 ½ ವರ್ಷಗಳ ಕಾಲ ಎದುರುದಾರರೊಂದಿಗೆ ವಾಸವಿದ್ದೆ ಎಂದು ನುಡಿಯುತ್ತಾರೆ.

ಮಗು ಮತ್ತು ಎದುರುದಾರರ ಡಿ ಎನ್ ಎ ಪರೀಕ್ಷೆಗೆ ಒಳಪಡಿಸಲು ನನ್ನದು ಯಾವುದೇ ತಕರಾರು ಇರುವುದಿಲ್ಲ. ನಾನು ಎದುರುದಾರನೊಂದಿಗೆ ಸಂಸಾರ ಮಾಡದೆ ಎದುರುದಾರರನ್ನು ಬಿಟ್ಟು ದೂರವಿದ್ದೇನೆ ಎಂದರೆ ಸರಿಯಲ್ಲ. ನಾನುಅರ್ಜಿಯಲ್ಲಿ ಕೇಳಿರುವಂತೆ ನನಗೆ ಮತ್ತು ನನ್ನ ಮಗುವಿಗೆ ಎದುರುದಾರರಿಂದ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸ ಇ ಎ ಒ,

sd/-

3 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಕಡೂರು